O.S.238/2015
PW-1

ದಿನಾಂಕ: 09-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು 8 ನೇ ಪ್ರತಿವಾದಿ ಪರ ಶ್ರೀ ಎಂ.ಆರ್.ಹೆಚ್. ವಕೀಲರಿಂದ</u>**

ನಾನು ಅನಕ್ಷರಸ್ಥೆ. ಸಾಕ್ಷಿಗೆ ದಿಃ04-05-2007 ರ ದಾನಪತ್ರವನ್ನು ತೊರಿಸಿದ್ದು, ಅದರಲ್ಲಿನ 2 ನೇ ಹಾಳೆಯ ಹಿಂಭಾಗದಲ್ಲಿರುವ ಭಾವಚಿತ್ರಗಳು ಯಾರದ್ದೆಂದು ಕೇಳಿದ್ದು, ಸಾಕ್ಷಿ ಸದರಿ ಭಾವಚಿತ್ರ 4 ನೇ ಪ್ರತಿವಾದಿ ಹಾಗೂ ನನ್ನ ತಂದೆಯ ಭಾವಚಿತ್ರ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾನಪತ್ರವನ್ನು ನಿಡಿ-1 ಎಂದು, 4 ನೇ ಪ್ರತಿವಾದಿ ಭಾವಚಿತ್ರವನ್ನು ನಿಡಿ-1(ಎ) ಎಂದು, ಹಾಗೂ ನನ್ನ ತಂದೆ ಸೊಮಶೆಟ್ಟಿ ರವರ ಭಾವಚಿತ್ರವನ್ನು ನಿಡಿ-1(ಬಿ) ಎಂದು ಗುರುತಿಸಲಾಯಿತು. ದಾವೆ ಹೂಡಲು ಸಮಯದಲ್ಲಿ ನಮ್ಮ ವಕೀಲರಿಗೆ ಮಾಹಿತಿಯನ್ನು ನಾನು ಹಾಗೂ ನನ್ನ ಗಂಡ ನೀಡಿರುತ್ತೇವೆ. ವಕೀಲರಿಗೆ ಮಾಹಿತಿ ನೀಡುವ ಸಮಯದಲ್ಲಿ ಏನೇನೂ ದಾಖಲಾತಿಗಳನ್ನು ಒದಗಿಸಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆ ಹೆಸರಿನಲ್ಲಿದ್ದ ಪಹಣಿ ಪತ್ರಿಕೆ, ಅವರು ತೀರಿಕೊಂಡ ನಂತರ ಅವರ ಹೆಸರಿನಲ್ಲಿದ್ದ ಪಹಣಿ ಪತ್ರಿಕೆಯನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ. ಯಾವ್ಯಾವ ಸ.ನಂ. ಗಳಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಗಳನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಸ.ನಂ.25/31,32, ಸ.ನಂ.182/1,2 ರ ಪಹಣಿಯನ್ನು ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಸ.ನಂ.25/31,32 ಎಷ್ಟು ಎಕರೆ ಪಹಣಿ ಎಂದರೆ ಸಾಕ್ಷಿ 4 ಎಕರೆ 23 ಗುಂಟೆ ಎಂದು ಹೇಳುತ್ತಾರೆ.

ನೀವು ವಕೀಲರಿಗೆ ಪಹಣಿ ಕೊಡುವ ಕಾಲಕ್ಕೆ ಸ.ನಂ.25/31,32 ಯಾರ್ಯಾರ ಹೆಸರಿಗೆ, ಎಷ್ಟೆಷ್ಟು ವಿಸ್ತೀರ್ಣ ಇತ್ತು ಎಂದರೆ ಸಾಕ್ಷಿ ನಾಗರಾಜು ಹೆಸರಿನಲ್ಲಿ ಪಹಣಿ ಇದ್ದಿದ್ದರಿಂದ ನ್ಯಾಯಾಲಯಕ್ಕೆ ಬಂದು ದಾವೆ ಹೂಡಿರುತ್ತೇನೆ ಎಂದು ಹೇಳುತ್ತಾರೆ. ಸ.ನಂ.182/1,2 ಯಾರ್ಯಾರ ಹೆಸರಿಗೆ, ಎಷ್ಟೆಷ್ಟು ವಿಸ್ತೀರ್ಣ ಇತ್ತು ಎಂದರೆ ಸಾಕ್ಷಿ ನಾಗರಾಜು ಹೆಸರಿನಲ್ಲಿ 2 ಎಕರೆ 20 ಗುಂಟೆ ಮತ್ತು ಗೌರಮ್ಮ ರವರ ಹೆಸರಿನಲ್ಲಿ ಪಹಣಿ ಇತ್ತು ಎಂದು ಹೇಳುತ್ತಾರೆ. ನಾಗರಾಜು ಎಂದರೆ ಇಂದು ನ್ಯಾಯಾಲಯದ ಮುಂದಿರುವ 8 ನೇಪ್ರತಿವಾದಿ.

ಸ.ನಂ.182/1,2 2 ಎಕರೆ 20 ಗುಂಟೆ ನಾಗರಾಜು ಹೆಸರಿಗೆ ಹೇಗೆ ಬಂತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ವಕೀಲರಿಗೆ ಮಾಹಿತಿ ನೀಡುವ ಕಾಲಕ್ಕೆ ನಾಗರಾಜು ರವರ ಹೆಸರಿಗೆ 2 ಎಕರೆ 20 ಗುಂಟೆ ಯಾವ ಆಧಾರದ ಮೇಲೆ ಖಾತೆ ಬಂದಿದೆ ಎಂದು

ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ.

ದಿಃ07-05-2000 ರಲ್ಲಿ ನಿಮ್ಮ ತಂದೆ ಬದುಕಿರುವಾಗ 4 ನೇ ಪ್ರತಿವಾದಿಗೆ ನಿಡಿ-1 ರಂತೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. 4 ನೇ ಪ್ರತಿವಾದಿ ನನ್ನ ನಾದಿನಿ. 4 ನೇ ಪ್ರತಿವಾದಿ ನಿಡಿ-1 ರಂತೆ ತಮ್ಮ ಹೆಸರಿಗೆ ದಾನ ಮಾಡಲಾದ ಆಸ್ತಿಯ ಖಾತೆ ಮಾಡಿಸಿಕೊಂಡಿದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. 4 ನೇ ಪ್ರತಿವಾದಿಯೇ ನಿಡಿ-1 ರಂತೆ ದಾನಪತ್ರದಿಂದ ನೀಡಲಾದ ಆಸ್ತಿಯನ್ನು ಖಾತೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ.4 ನೇ  ಪ್ರತಿವಾದಿಯು ದಿಃ13-09-2010 ರಲ್ಲಿ 8 ನೇ ಪ್ರತಿವಾದಿಗೆ  ನಿಡಿ-1 ರಂತೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮಾರಾಟ ಮಾಡುವ ಹಕ್ಕು ಇಲ್ಲ  ಎಂದು ಹೇಳುತ್ತಾರೆ.

ನಿಪಿ-18 ರಂತೆ ಕ್ರಯಪತ್ರವನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಕೊಟ್ಟಿರಬಹುದು  ಎಂದು ಹೇಳುತ್ತಾರೆ. ನಿಡಿ-1 ರಂತೆ ದಾನ ಪತ್ರದ ಮಾಡಿದ ವಿಚಾರ ಹಾಗೂ ನಿಡಿ-18 ರಂತೆ ಕ್ರಯಪತ್ರವಾದ ಬಗ್ಗೆ ನಿಮಗೆ ದಾವೆ ಹೂಡುವ ಪೂರ್ವದಲ್ಲೇ ಗೊತ್ತಿತ್ತು ಎಂದರೆ ಸಾಕ್ಷಿ 2012 ರಲ್ಲಿ ಗೊತ್ತಾಯಿತು  ಎಂದು ಹೇಳುತ್ತಾರೆ. ನಿಡಿ-1 ಮತ್ತು ನಿಡಿ-18 ದಾಖಲೆಗಳು ಮೋಸದಿಂದ ಆಗಿವೆ ಎಂದು ನೀವು ಯಾವುದಾದರೂ ರೆವಿನ್ಯೂ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ನಿಡಿ-1 ಮತ್ತು 18 ರಂತೆ ಆದ ದಾಖಲೆಗಳು ಎರಡು ನಿಮಗೆ ಒಪ್ಪಿಗೆ ಇದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.